ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕಿಗೆ ಸೇರಿದ ಈ ಕೆಳಕಂಡ ಸ್ಥಳಗಳನ್ನು ಪ್ರವಾಸಿ ಕೇಂದ್ರಗಳೆಂದು ಗುರುತಿಸಲಾಗಿದೆ ,–

1 ಧರ್ಮಸ್ಥಳ

2 ವೇಣೂರು

3 ಸಿಸಿಲ

4 ಜಮಾಲಾಬಾದ್

ಆ) ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸಿ ಮಾಹಿತಿ ಮಡಿಕೆ ಮೂಲಕ ಸದರಿ ಸ್ಥಳಗಳ ಬಗ್ಗೆ ಮಾಹಿತಿಯನ್ನು ಪ್ರವಾಸಿಗರಿಗೆ ಒದಗಿಸಲಾಗುತ್ತಿದೆ ಧರ್ಮಸ್ಥಳ, ವೇಣುರುಗಳನ್ನು ಜೈನ್ ಸರ್ಕ್ಯೂಟ್ ಎಂಬ ಪ್ರತ್ಯೇಕ ಮಾಹಿತಿ ಮಡಿಕೆಯಲ್ಲೂ ಪ್ರಚಾರ ಪಡಿಸಲಾಗಿದೆ

ವೇಣೂರು, ಜಮಾಲಾಬಾದ್‌ಗಳಲ್ಲಿ ಸೂಕ್ತ ನಿವೇಶನ ದೊರೆತಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು

ಇ) ಗುರುವಾಯನ ಕೆರೆಯನ್ನು ನೇರವಾಗಿ ಇಲಾಖೆಯು ಸ್ವಾಧೀನಪಡಿಸಿಕೊಳ್ಳಲು ಬರುವುದಿಲ್ಲ ಆದರೆ ಈ ಕೆರೆಯಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಸೌಲಭ್ಯ ಕಲ್ಪಿಸಲು ಜಿಲ್ಲಾಡಳಿತವು ಒಪ್ಪಿ ಮುಂದೆ ಬಂದಲ್ಲಿ ಇಲಾಖೆಯು ಸಹಕಾರವನ್ನು ನೀಡುತ್ತದೆ

1495 (2073) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಬೆಳ್ತಂಗಡಿ ಹಾಗೂ ಉಜಿರೆ ಪ್ರದೇಶಕ್ಕೆ ಅಗತ್ಯವುಳ್ಳ ಒಳಚರಂಡಿ ಹಾಗೂ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ಸರ್ಕಾರವು ರೂಪಿಸಿದೆಯೇ,

ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ಜಾರಿಗೆ ತರಲು ಸರ್ಕಾರದ ಕ್ರಿಯಾ ಯೋಜನೆಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು)

ಅ) ಬೆಳ್ತಂಗಡಿ ಪ್ರದೇಶಕ್ಕೆ ಒಳಚರಂಡಿ ಯೋಜನೆ ಹಾಗೂ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ರೂಪಿಸಿರುವುದಿಲ್ಲ ಹಾಗೂ ಉಜಿರೆ ಪ್ರದೇಶವು ಮಂಡಳಿ ವ್ಯಾಪ್ತಿಗೆ ಬರುವುದಿಲ್ಲ

ಆ) ಉದ್ಭವಿಸುವುದಿಲ್ಲ

1496 (2074) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಂಜೂರಾಗಿರುವ ಕಿರುಜಲ ವಿದ್ಯುತ್ ಕೇಂದ್ರಗಾಳಾವುವು ಇವುಗಳಲ್ಲಿ ಯಾವ ಯಾವ ಜಲ ವಿದ್ಯುತ್ ಕೇಂದ್ರಗಳು ಕಾಮಗಾರಿಗಳನ್ನು ಪ್ರಾರಂಭಿಸಿವ, ಇವುಗಳ ಸಂಪೂರ್ಣ ವಿವರಗಳನ್ನು ನೀಡುವುದು,

ಆ) ಸದರಿ ಜಲ ವಿದ್ಯುತ್ ಕೇಂದ್ರಗಳಲ್ಲಿನ ವಿದ್ಯುತ್ ಉತ್ಪಾದನೆಗೆ ಮತ್ತು ವಿತರಣೆಗೆ ನಿಗಧಿಪಡಿಸಿರುವ ಕಾಲಾವಧಿ ಎಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಂಜೂರಾಗಿರುವ ಕಿರುಜಲ ವಿದ್ಯುತ್ ಯೋಜನೆಗಳ ವಿವರಗಳು ಮತ್ತು ಈಗಾಗಲೇ ಕಾಮಗಾರಿಗಳನ್ನು ಪ್ರಾರಂಭಿಸಿರುವ ಜಲ ವಿದ್ಯುತ್ ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಈ ಕೆಳಕಂಡಂತೆ ಕಾಲಾವಧಿಯನ್ನು ನೀಡಲಾಗುವುದು

ಅ	ಡಿ ಪಿ ಆರ್ ಸಲ್ಲಿಸಲು	3 ವರ್ಷಗಳು
ಆ	ಆರ್ಥಿಕ ಸಮಾಪನೆ ಮಾಡಿಕೊಳ್ಳಲು	6 ತಿಂಗಳು
ಇ	ಯೋಜನೆಯನ್ನು ಅನುಷ್ಠಾನ ಮಾಡಲು	24 ತಿಂಗಳುಗಳು (ಆರ್ಥಿಕ ಸಮಾಪನೆ ಮಾಡಿಕೊಂಡ ನಂತರ)